



ಸ್ವಾತಂತ್ರ್ಯ ಚಳವಳಿಯ ಕಥನವನ್ನು ಪ್ರಧಾನವಾಗಿ ಒಳಗೊಂಡ ಕನ್ನಡದ ಏಕೈಕ ಸಿನಿಮಾ ಎನ್ನುವುದು 'ಮಾಡಿ ಮಡಿದವರು' ಚಿತ್ರದ ವಿಶೇಷಗಳಲ್ಲೊಂದು. ಕಥೆಯ ಕಾರಣದಿಂದ ಮಾತ್ರವಲ್ಲ – ವ್ಯಾಕರಣದ ದೃಷ್ಟಿಯಿಂದ ಕೂಡ ಈ ಸಿನಿಮಾ ಮಹತ್ವವಾದುದು. ಗೆರೆ ಕೊಂಚ ಆಚೀಚೆಯಾದರೆ ಸಾಕ್ಷ್ಯಚಿತ್ರ ಆಗಿಬಿಡುತ್ತಿದ್ದ ಸಾಧ್ಯತೆಯೇ ಶಂಕರಪ್ಪನವರಿಗೆ ದೃಶ್ಯಗಳನ್ನು ಕಟ್ಟುವ ಮೇಲಿದ್ದ ಹಿಡಿತವನ್ನು ಸೂಚಿಸುವಂತಿದೆ. ಸಿನಿಮಾದ ಶಿಲ್ಪ ನೇರ್ಪುಗೊಳ್ಳುವಲ್ಲಿ ಯು.ಎಂ.ಎನ್. ಷರೀಫ್ ಅವರ ಛಾಯಾಗ್ರಹಣ ಹಾಗೂ ಉಮೇಶ್ ಕುಲಕರ್ಣಿ ಅವರ ಸಂಕಲನ ಗಮನಾರ್ಹ ಪಾತ್ರ ವಹಿಸಿವೆ.

ಗಾಂಧಿಯನ್ನು ಮುಖಾಮುಖಿಯಾಗಿರುವ ಕನ್ನಡದ ಮತ್ತೆರಡು ಚಿತ್ರಗಳು ನಂಜುಂಡೇಗೌಡರ 'ನಾನು ಗಾಂಧಿ' ಹಾಗೂ ಗಿರೀಶ ಕಾಸರವಳ್ಳಿಯವರ 'ಕೂರ್ಮಾವತಾರ'. 'ನಾನು ಗಾಂಧಿ' ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಕಥೆಯನ್ನು ಆಧರಿಸಿದ ಸಿನಿಮಾ. ಎರಡೂ ಚಿತ್ರಗಳು ವರ್ತಮಾನದ ತವಕತಲ್ಲಣಗಳ ಹಿನ್ನೆಲೆಯಲ್ಲಿ ಗಾಂಧಿಯನ್ನು ಅರ್ಥೈಸುವ ವಿಶಿಷ್ಟ ಪ್ರಯತ್ನಗಳು. ನಂಜುಂಡೇಗೌಡರ ಚಿತ್ರದಲ್ಲಿ ಗಾಂಧಿ ಎನ್ನುವ ಹೆಸರನ್ನಿಟ್ಟುಕೊಂಡಿರುವ ಹುಡುಗನೊಬ್ಬ ಇನ್ನಿಲ್ಲದ ಅವಮಾನ, ನೋವುಗಳಿಗೆ ಒಳಗಾಗುತ್ತಾನೆ. ಗಿರೀಶರ ಚಿತ್ರದ ನಾಯಕ ಗಾಂಧಿಯ ಪಾತ್ರದಲ್ಲಿ ನಟಿಸುತ್ತಾ ನಟಿಸುತ್ತಾ ಜಗತ್ತನ್ನು ಹೊಸಬಗೆಯಲ್ಲಿ ನೋಡತೊಡಗುತ್ತಾನೆ.

ಬೆಸಗರಹಳ್ಳಿಯವರ 'ಗಾಂಧಿ' ಹಲವು ಕವಲುಗಳನ್ನು ಹೊಂದಿರುವ ಕಥೆ. ಗಾಂಧಿ ಎನ್ನುವ ಹೆಸರು ಜನಸಾಮಾನ್ಯರ ಪಾಲಿಗೆ ಹೊರೆಯಾಗುವುದನ್ನು ಸೂಚಿಸುವ ಕಥೆ, ಭಾರತೀಯ ಸಮಾಜದಲ್ಲಿ ಗಾಂಧಿ ಉಳಿದುಕೊಂಡಿರುವ ಸ್ವರೂಪದ ಬಗ್ಗೆ ಚರ್ಚಿಸುತ್ತದೆ. ಕರಿಸಿದ್ದೇಗೌಡ ಎನ್ನುವ ಬಡರೈತ ತನ್ನ ಮೊಮ್ಮಗನನ್ನು ಗಾಂಧಿ ಎಂದು ಹೆಸರಿಸುತ್ತಾನೆ. ಗೆಳೆಯರ ನಡುವೆ, ಶಾಲೆಯಲ್ಲಿ ಹೆಸರಿನ ಕಾರಣದಿಂದಾಗಿ ಗೇಲಿಗೊಳಗಾಗುವ ಹುಡುಗ, ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗಲೂ ತಮಾಷೆಯ ವಸ್ತುವಾಗುತ್ತಾನೆ. ವೈದ್ಯರ ನಿರ್ಲಕ್ಷ್ಯದಿಂದಾಗಿ ಗಾಂಧಿ ಸಾಯುತ್ತಾನೆ. ಈ ದುರಂತದ ಕಥೆಯೊಂದಿಗೆ ಸರ್ಕಾರ ಸ್ವಾಧೀನಪಡಿಸಿಕೊಂಡಿರುವ ತನ್ನ ಜಮೀನಿನಲ್ಲಿ ಇರುವ ಹಲಸಿನ ಮರವನ್ನು ಕಡಿದುಕೊಳ್ಳಬೇಕೋ ಬೇಡವೋ ಎನ್ನುವ ರೈತನ ಜಿಜ್ಞಾಸೆಯೂ ಕಥೆಯಲ್ಲಿದೆ. ಕಥೆಯಲ್ಲಿನ ಸಂಕೀರ್ಣತೆಯನ್ನು ನಂಜುಂಡೇಗೌಡರು ಸರಳಗೊಳಿಸಿದ್ದಾರೆ. ಸಿನಿಮಾದಲ್ಲಿನ ಗಾಂಧಿ ಕೂಡ ಆಸ್ಪತ್ರೆ ಸೇರುತ್ತಾನೆ. ಆದರೆ, ವೈದ್ಯರಿಗೆ ಜ್ಞಾನೋದಯವಾಗುವ ಮೂಲಕ ಬದುಕುಳಿಯುತ್ತಾನೆ. ಕಥೆಯಲ್ಲಿನ ಬಡ ರೈತನನ್ನು ನಂಜುಂಡೇಗೌಡರು ಸ್ವಾತಂತ್ರ್ಯ ಹೋರಾಟಗಾರನನ್ನಾಗಿಸಿದ್ದಾರೆ. ಗಾಂಧಿ ಹೆಸರಿನ ಪಾವಿತ್ರ್ಯವನ್ನು ಗೇಲಿಗೊಳಪಡಿಸಲು ಬಯಸದ ಹುಡುಗ ತನ್ನ ಹೆಸರು ಬದಲಿಸಿಕೊಳ್ಳಲು ಮುಂದಾಗುತ್ತಾನೆ. ಅದುವರೆಗೆ ಯಾರೆಲ್ಲ ಗಾಂಧಿಯನ್ನು ಗೇಲಿ ಮಾಡಿದ್ದರೂ ಈಗ ಅವರೆಲ್ಲ ಹೆಸರು ಬದಲಿಸಿಕೊಳ್ಳದಿರುವಂತೆ ಹುಡುಗನ ಮೇಲೆ ಒತ್ತಡ ಹೇರುತ್ತಾರೆ. 'ಮನುಷ್ರು ಸಾಯ್ತೆ ಕಲ್ಲು ಸತ್ತಾದ. ಸುಮ್ಕಿರು ಮತೆ' ಎನ್ನುವ ಕಥೆಯಲ್ಲಿನ ಗಾಂಧಿಯಷ್ಟು ಸಿನಿಮಾ ಗಾಂಧಿ ಜೀವನದಲ್ಲಿ ಮಾಗಿದಂತೆ ಕಾಣಿಸುವುದಿಲ್ಲ. ಆದರೆ, ವೈಯಕ್ತಿಕ ಸ್ತರದಿಂದ ಸಾಮೂಹಿಕ ಹಂತಕ್ಕೆ ಗಾಂಧಿಮಾರ್ಗ ವಿಸ್ತರಿಸುವ ನಿರ್ದೇಶಕರ ಆಶಾಭಾವ ಮುಖ್ಯವಾದುದು.

ಗಿರೀಶ ಕಾಸರವಳ್ಳಿ ನಿರ್ದೇಶನದ 'ಕೂರ್ಮಾವತಾರ' ಕುಂ. ವೀರಭದ್ರಪ್ಪನವರ ಕಥೆಯನ್ನು ಆಧರಿಸಿದ ಸಿನಿಮಾ. 'ನಾನು ಗಾಂಧಿ' ಚಿತ್ರದ ಹುಡುಗ ಗಾಂಧಿಯ ಹೆಸರನ್ನು ಹೊಂದುವ